

بِسۡمِ اللّٰہِ الرَّحۡمٰنِ الرَّحِیۡمِ

# ಲೋಕದಲ್ಲಿ ಹಬ್ಬುತ್ತಿರುವ ಇಸ್ಲಾಮ್ ವಿರೋಧ ಮತ್ತು ಮುಸಲ್ಮಾನರ ಸ್ಥಿತಿ ಹಾಗು ಅಹ್ಮದಿಯಾ ಮುಸ್ಲಿಮರ ಹೊಣೆಗಾರಿಕೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **17-03-2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಪಶ್ಚಿಮದ ಮತ್ತು ಅಭಿವೃದ್ಧಿಹೊಂದಿದ ರಾಷ್ಟ್ರಗಳಲ್ಲಿ ಬಲಪಂಥೀಯರಾದ ರಾಜಕೀಯ ಪಕ್ಷಗಳು, ಜನಾಂಗ ಭೇದ ಮತ್ತು ವಂಶ ಭೇದವನ್ನು ಪ್ರತಿಪಾದಿಸುವ ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು ಪ್ರಬಲರಾಗುತ್ತಿರುವುದನ್ನು ನಾವಿಂದು ಕಾಣುತ್ತಿದ್ದೇವೆ. ಅವರ ಮಹತ್ವ ವರ್ಧಿಸುತ್ತಾ ಇದೆ. ರಾಜಕೀಯ ವಿಶ್ಲೇಷಕರು ಇದರ ಬಗ್ಗೆ ಬಹಳ ಬರೆಯುತ್ತಿದ್ದಾರೆ. ಇಂದು ಅಧಿಕಾರದಲ್ಲಿರುವ ಎಡಪಂಥೀಯ ಸರಕಾರಗಳ ಎಮಿಗ್ರೇಶನ್ ಪಾಲಿಸಿ (ವಲಸೆಗಾರರಿಗೆ ಸಂಬಂಧಿಸಿದ ಧೋರಣೆ) ಕಾರಣ ಇವುಗಳೆಲ್ಲಾ ನಡೆಯುತ್ತಿವೆ. ಇದಕ್ಕೆ ಹೊರತಾಗಿ ಬೇರೆ ಕಾರಣಗಳೂ ಇವೆ. ಆದರೆ ಇವುಗಳೆಲ್ಲಾ ಮುಸ್ಲಿಮರ ಮೇಲೆ ಪರಿಣಾಮ ಬೀರುತ್ತವೆ. ಮುಸ್ಲಿಮರು ಈ ದೇಶಗಳನ್ನು ಪ್ರವೇಶಿಸುವುದನ್ನು ತಡೆಯಬೇಕು ಎಂದು ಅವರು ಹೇಳುತ್ತಾರೆ. ಏಕೆಂದರೆ ಅವರು ನಮ್ಮವರಲ್ಲಿ ಸೇರಿಕೊಳ್ಳದೆ ಬೇರೆಯಾಗಿಯೇ ಇರುತ್ತಾರೆ. ಅವರ ಅಭಿಪ್ರಾಯದಲ್ಲಿ ಮುಸ್ಲಿಮರು ಉಗ್ರಗಾಮಿ ಧರ್ಮವನ್ನು ಅನುಸರಿಸುತ್ತಾರೆ ಎಂದೆಲ್ಲಾ ಆಕ್ಷೇಪಿಸುತ್ತಾರೆ. ಅವರು ಹೀಗೆ ಸಹ ಹೇಳುತ್ತಾರೆ: ಮುಸ್ಲಿಮರು ನಮ್ಮೊಂದಿಗೆ ವಾಸಿಸಲು ಬಯಸುವುದಾದರೆ ಅವರು ತಮ್ಮ ಸಂಪ್ರದಾಯಗಳನ್ನು ತ್ಯಜಿಸಿ ನಮ್ಮ ರೀತಿ ನೀತಿಗಳನ್ನು, ನಮ್ಮ ಜೀವನ ಕ್ರಮಗಳನ್ನು ತಮ್ಮಲ್ಲಿ ಅಳವಡಿಸಬೇಕು. ಮುಸ್ಲಿಮರು ಈ ರೀತಿ ಮಾಡಲು ಸಿದ್ಧರಾಗಿಲ್ಲವಾದರೆ ಅದರ ಅರ್ಥ ಅವರು ನಮ್ಮೊಂದಿಗೆ ಸೇರಿಕೊಳ್ಳಲು ಇಚ್ಛಿಸುವುದಿಲ್ಲ ಎಂದಾಗುತ್ತದೆ. ಮುಸ್ಲಿಮರು ತಮ್ಮ ವ್ಯಕ್ತಿತ್ವವನ್ನು ಮತ್ತು ತಮ್ಮ ಧಾರ್ಮಿಕ ಸ್ಥಿತಿಯನ್ನು ಸ್ಥಿರವಾಗಿರಿಸಲು ಇಚ್ಛಿಸುವುದಾದರೆ ಅದರ ಪರಿಣಾಮವಾಗಿ ಅವರು ನಮ್ಮ ದೇಶಕ್ಕೆ ಅಪಾಯಕಾರಿಗಳಾಗಬಹುದಾಗಿದೆ. ಮುಸ್ಲಿಮರ ಮಸ್‌ಜಿದ್‌ಗಳ ಮಿನಾರಗಳು ನಮ್ಮ ದೇಶಕ್ಕೆ ಹಾನಿಕರವಾಗಿವೆ ಎಂದೆಲ್ಲಾ ಅಜ್ಞಾನದ ಮಾತುಗಳನ್ನು ಹೇಳುತ್ತಾರೆ. ಅವರು ಹೇಳುತ್ತಾರೆ, ಮುಸ್ಲಿಮರ ಮಹಿಳೆಯರು ಹಿಜಾಬ್ ಧರಿಸುವುದು ನಮಗೆ ಅಪಾಯಕರವಾಗಿದೆ. ಮುಸ್ಲಿಮ್ ಮಹಿಳೆಯರು ಪುರುಷರ ಹಸ್ತಲಾಘವ ಮಾಡದಿರುವುದು ಮತ್ತು ಮುಸ್ಲಿಮ್ ಪುರುಷರು ಮಹಿಳೆಯರ ಹಸ್ತಲಾಘವ ಮಾಡದಿರುವುದು ನಮಗೆ ಅಪಾಯಕರವಾಗಿದೆ ಎಂದು ಅವರು ಹೇಳುತ್ತಾರೆ. ಇಲ್ಲಿ ಯು.ಕೆ.ಯಲ್ಲಿ ಕೇವಲ ಒಂದೆರಡು ರಾಜಕಾರಣಿಗಳು ಮಾತ್ರ ಇಂತಹ ಮಾತುಗಳನ್ನು ಪ್ರಾಯಶಃ ಆಡುತ್ತಾರೆ. ಆದರೆ ಇತರ ದೇಶಗಳಲ್ಲಿ ಇವುಗಳಿಗೆ ಸಂಬಂಧಿಸಿ ಬಹಳಷ್ಟು ಗುಲ್ಲೆಬ್ಬಿಸುತ್ತಾರೆ. ಪ್ರತಿದಿನ ರಾಜಕಾರಣಿಗಳು ಇವುಗಳಿಗೆ ಸಂಬಂಧಿಸಿ ಹೇಳಿಕೆ ನೀಡುತ್ತಾ ಇರುತ್ತಾರೆ. ಅವರು ತಮ್ಮ ಮಾತನ್ನು ಈರೀತಿ ಸಮರ್ಥಿಸುತ್ತಾರೆ. ಅವರು ಹೇಳುತ್ತಾರೆ: ಮುಸ್ಲಿಮ್ ದೇಶಗಳಲ್ಲಿ ಉಗ್ರವಾದಿ ಚಟುವಟಿಕೆಗಳು ಮತ್ತು ಅರಾಜಕತೆ ಅತ್ಯಂತ ವರ್ಧಿಸಿದೆ. ನಮ್ಮ ದೇಶಗಳಲ್ಲಿಯೂ ಭಯೋತ್ಪಾದಕ ಕೃತ್ಯಗಳು ಮುಸ್ಲಿಮರಿಂದಲೇ ಹೆಚ್ಚಾಗಿ ನಡೆಯುತ್ತವೆ. ಇವುಗಳೆಲ್ಲಾ ಮುಸ್ಲಿಮರು ನಮಗೆ ಅಪಾಯಕಾರಿಗಳಾಗಿದ್ದಾರೆ ಎಂದು ಸಾಬೀತುಗೊಳಿಸುತ್ತವೆ ಎಂದು ಅವರು ಹೇಳುತ್ತಾರೆ. ಅವರು ಇಸ್ಲಾಮ್ ಧರ್ಮಕ್ಕೆ ವಿರುದ್ಧವಾದ ಮಾತುಗಳನ್ನು ಹೇಳಿಯೂ ತಮ್ಮ ವಾದವನ್ನು ಸಮರ್ಥಿಸುತ್ತಾರೆ. ಆದರೆ ಅವರು ಹೇಳುವ ಒಂದು ಮಾತು ದುರದೃಷ್ಟವಶಾತ್ ಸತ್ಯವಾಗಿದೆ. ಮುಸ್ಲಿಮ್ ದೇಶಗಳಲ್ಲಿ ಭಯೋತ್ಪಾದಕ ಕೃತ್ಯಗಳು ನಡೆಯುತ್ತಿವೆ. ಆದರೆ ವಾಸ್ತವಿಕವಾಗಿ ಭಯೋತ್ಪಾದಕ ಗುಂಪುಗಳಿಗೆ ಮತ್ತು ಮುಸ್ಲಿಮ್ ದೇಶಗಳ ವಿದ್ರೋಹಿಗಳಿಗೆ ಆಯುಧಗಳು ಪಾಶ್ಚಿಮಾತ್ಯ ದೇಶಗಳಿಂದಲೇ ದೊರಕುತ್ತವೆ. ತಮ್ಮ ಉದ್ದೇಶಲಕ್ಷ್ಯಗಳನ್ನು ಈಡೇರಿಸಲು, ಇಸ್ಲಾಮ್ ಧರ್ಮದ ವಿರುದ್ಧ ಅವರಿಗಿರುವ ದ್ವೇಷವನ್ನು ಪ್ರಕಟಿಸಲು, ಪಶ್ಚಿಮದ ಕೆಲವು ಶಕ್ತಿಶಾಲಿ ದೇಶಗಳು ಬಹಳ ಜಾಗರೂಕತೆಯಿಂದ ಈ ಭಯೋತ್ಪಾದಕ ಗುಂಪುಗಳನ್ನು ವ್ಯವಸ್ಥೆಗೊಳಿಸಿವೆ.

ದುರದೃಷ್ಟಕರವಾದ ವಿಷಯವೇನೆಂದರೆ ಮುಸ್ಲಿಮರಿಗೆ ಯಾವಾಗಲೆಲ್ಲಾ ಹಾನಿ ಸಂಭವಿಸಿತೋ ಮುಸ್ಲಿಮರ ಸ್ವಂತ ಕೃತ್ಯಗಳ ಕಾರಣದಿಂದಲೇ ಅವು ಸಂಭವಿಸಿವೆ. ಮುಸ್ಲಿಮರ ತಮ್ಮೊಳಗಿನ ಗೂಢಕಾರಸ್ಥಾನಗಳ ಮೂಲಕ, ವಿದ್ರೋಹಗಳ ಮೂಲಕ ಮತ್ತು ಒಬ್ಬರಿನ್ನೊಬ್ಬರ ಹಕ್ಕು ಈಡೇರಿಸಿಕೊಡದ ಕಾರಣದಿಂದ, ಸಾಮುದಾಯಿಕ ಲಾಭಕ್ಕೆ, ಸಾಮುದಾಯಿಕ ಹಿತಕ್ಕೆ ವೈಯ್ಯಕ್ತಿಕ ಹಿತದ ಮೇಲೆ ಆದ್ಯತೆ ನೀಡದ ಕಾರಣದಿಂದ ಅವು ಸಂಭವಿಸಿವೆ. ಇಸ್ಲಾಮ್ ಧರ್ಮ ತತ್ವಗಳನ್ನು ಮರೆತು, ತಮ್ಮ ವಾಸ್ತವಿಕ ಗುರಿಯನ್ನು ಕಡೆಗಣಿಸಿದ ಕಾರಣದಿಂದ ಮುಸ್ಲಿಮರಿಗೆ ಹಾನಿ ಉಂಟಾಗಿದೆ. ತಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಬದಲಾಗಿ, ಅಲ್ಲಾಹನ ಮತ್ತು ಅವನ ಸಂದೇಶವಾಹಕ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆಗಳನ್ನು ಪಾಲಿಸುವುದಕ್ಕೆ ಬದಲಾಗಿ, ಲೌಕಿಕ ಲಾಲಸೆ ಮತ್ತು ಲೌಕಿಕ ಘನತೆಗೆ ಅಧಿಕಾರಾರೂಢರು, ಇತರ ರಾಜಕಾರಣಿಗಳು, ಮತ ಪಂಡಿತರೂ ಆದ್ಯತೆ ನೀಡುತ್ತಾರೆ. ಮುಸ್ಲಿಮ್ ಸಮುದಾಯವನ್ನು ಇನ್ನಷ್ಟು ಗಾಢಾಂಧಕಾರದ ಹೊಂಡದಲ್ಲಿ ದೂಡಿ ಹಾಕಲು ಮತ ಪಂಡಿತರು ಧರ್ಮದ ನೆವನದಿಂದ ಕಾರ್ಯ ಪ್ರವೃತ್ತರಾಗುತ್ತಾರೆ. ಆ ಕೆಲಸ ಮುಂದುವರಿಸುತ್ತಲ್ಲೇ ಇದ್ದಾರೆ. ಈ ಕಾಲಘಟ್ಟದ ಸ್ಥಿತಿಯನ್ನು ಮನವರಿಕೆ ಮಾಡಿಕೊಂಡು ಅಲ್ಲಾಹನ ವಾಗ್ದಾನವನ್ನು ತಮ್ಮ ಮುಂದಿರಿಸಿ ಈ ಕಾಲದ ಆವಶ್ಯಕತೆ ಏನೆಂದು ಚಿಂತಿಸಿ,

ಇಂತಹ ಪರಿಸ್ಥಿತಿಯಲ್ಲಿ ಆಗಮಿಸುವರೆಂದು ಅಲ್ಲಾಹನು ಮೊದಲೇ ತಿಳಿಸಿದ ಆ ವ್ಯಕ್ತಿಯನ್ನು ಮತಪಂಡಿತರು ಹುಡುಕಬೇಕಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಆಗಮಿಸುವ ಮಹಾನುಭಾವ ಸತ್ಯ ವಿಶ್ವಾಸವನ್ನು ಸುರಯ್ಯಾ (ಕೃತ್ತಿಕಾ) ನಕ್ಷತ್ರದಿಂದ ಮರಳಿ ತಂದು ಇಸ್ಲಾಮಿನ ಘನತೆಯನ್ನೂ ಮುಸ್ಲಿಮರ ವಿಶ್ವಾಸವನ್ನೂ ಪುನಃ ಸ್ಥಾಪಿಸುವರೆಂದು ವಾಗ್ದಾನ ನೀಡಲಾಗಿತ್ತು. ಆದರೆ, ದುರಾದೃಷ್ಟವಶಾತ್ ಈ ಜನರು ಈ ವಿಷಯವನ್ನು ನಿರ್ಲಕ್ಷಿಸಿರುವರಲ್ಲದೆ ಅಲ್ಲಾಹನು ನಿಯೋಜಿಸಿದವರನ್ನು ವಿರೋಧಿಸುವುದರಲ್ಲಿ ಎಷ್ಟು ಮುಂದುವರಿದಿರುವರೆಂದರೆ ಅದಕ್ಕೆ ಮಿತಿಯೇ ಇರುವುದಿಲ್ಲ. ಆ ಮಹಾನುಭಾವರನ್ನು ನಂಬುವವರ ಮೇಲೆ ನಡೆಸುವ ದೌರ್ಜನ್ಯ ಸಹ ಮಿತಿಮೀರಿದೆ. ಅಲ್‌ಜೀರಿಯಾ ದೇಶದಲ್ಲಿ ಈ ದೌರ್ಜನ್ಯ ಬಹಳ ವರ್ಧಿಸಿದೆ. ಪೋಲೀಸರು ಅಹ್ಮದಿಯರಿಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ನ್ಯಾಯಾಲಯಗಳು ತಮಗೆ ಇಷ್ಟಬಂದಂತೆ ತೀರ್ಪು ನೀಡಿ ಅಹ್ಮದಿಯರನ್ನು ಸೆರೆಮನೆಗೆ ಹಾಕುತ್ತವೆ. ಕೆಲವರಿಗೆ ಮೂರು ವರ್ಷಗಳ ತನಕದ ಜೈಲು ಶಿಕ್ಷೆ ನೀಡಲಾಗಿದೆ. 'ಅಲ್ಲಾಹನಿಂದ ನಿಯುಕ್ತರಾದ ಇಮಾಮರನ್ನು ನಾವು ನಂಬಿದ್ದೇವೆ. ಅಲ್ಲಾಹನು ಮತ್ತು ಅವನ ಸಂದೇಶವಾಹಕರು ನಮಗೆ ಹೀಗೆ ಮಾಡಲು ಆಜ್ಞಾಪಿಸಿದ್ದಾರೆ' ಎಂದು ಹೇಳಿದ ಕಾರಣ ಕೆಲವರಿಗೆ ಒಂದರಿಂದ ಮೂರು ವರ್ಷಗಳ ಕಾಲದ ಶಿಕ್ಷೆ ನೀಡಲಾಗಿದೆ. ಶಿಕ್ಷಿಸಲ್ಪಟ್ಟವರು, ಶಿಕ್ಷೆಯನ್ನು ಪ್ರತೀಕ್ಷಿಸುತ್ತಾ ಇರುವವರು, ಪೋಲೀಸರ ವಶದಲ್ಲಿರುವವರು ಮತ್ತು ಪೋಲೀಸರ ಹಿಂಸಾಚಾರಗಳಿಗೆ ಗುರಿಯಾಗುತ್ತಿರುವವರು, ಇವರ ಸಂಖ್ಯೆ ಇನ್ನೂರಕ್ಕಿಂತ ಹೆಚ್ಚಿಗೆ ಇದೆ. ಅವರೆಲ್ಲರೂ ದೌರ್ಜನ್ಯ ಪೀಡಿತರಾಗಿದ್ದರೂ ಅವರು ಹೀಗೆ ಹೇಳುತ್ತಿದ್ದಾರೆ: ನಮ್ಮ ಮೇಲೆ ಎಷ್ಟು ದೌರ್ಜನ್ಯ ನಡೆಸಿದರೂ ನಾವು ನಮ್ಮ ವಿಶ್ವಾಸದಿಂದ ಹಿಂದೆ ಸರಿಯಲಾರೆವು.

ಆದರೆ ದೌರ್ಜನ್ಯಗಾರರಾದ ಜನರು ನೆನಪಿಡಬೇಕು. ಅಲ್ಲಾಹನು ದೌರ್ಜನ್ಯ ಪೀಡಿತರನ್ನು ನೋಡುತ್ತಿದ್ದಾನೆ. ದೌರ್ಜನ್ಯ ಪೀಡಿತನ ಪ್ರಾರ್ಥನೆ ಅಲ್ಲಾಹನ ಅರ್ಶ್‌ಗೆ ತಲಪುತ್ತಿದೆ. ಅಲ್ಲಾಹನ ನ್ಯಾಯಾಲಯದಿಂದ ತೀರ್ಪು ಹೊರಬೀಳುವಾಗ ಈ ದೌರ್ಜನ್ಯಗಾರರಿಗೆ ಇಹಲೋಕವೂ ಇರಲಾರದು, ಪರಲೋಕವೂ ಇರಲಾರದು ಎಂಬುದನ್ನು ಇವರು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು. ಆದುದರಿಂದ ಈ ಜನರು ಅಲ್ಲಾಹನ ವಿಧಿನಿರ್ಣಯದ ಬಗ್ಗೆ ಭಯಪಡಬೇಕಾಗಿದೆ. ಅಹ್ಮದಿಯರ ವಿರುದ್ಧ ದೌರ್ಜನ್ಯ ಮಾಡಿ ಇಸ್ಲಾಮಿನ ಹೆಸರಲ್ಲಿ ತಪ್ಪು ಕೆಲಸ ಮಾಡಿ ತಮ್ಮ ಅಧಿಕಾರ ಬಲದಿಂದ, ಇದು ತಮ್ಮ ಜಯವೆಂದು ಭಾವಿಸುವವರು ನೆನಪಿಡಬೇಕು– ಅವರು ಮುಂದೆ ಒಂದು ದಿನ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗಲಿಕ್ಕಿದೆ ಮತ್ತು ತಾವು ಮಾಡಿದ ದೌರ್ಜನ್ಯಗಳ ಬಗ್ಗೆ ಅಲ್ಲಾಹನಿಗೆ ಉತ್ತರ ನೀಡಲಿಕ್ಕಿದೆ ಎಂದು.

ಮುಸ್ಲಿಮರ ಇಂದಿನ ಸ್ಥಿತಿ ಬಹಳ ವಿಚಿತ್ರವಾಗಿದೆ. ಒಂದು ಕಡೆ ಮೌಲವಿ ನಾಮಧೇಯರ ಗುಂಪಿದೆ ಅಥವಾ ಉಗ್ರವಾದಿಗಳ ಗುಂಪಿದೆ. ಅವರು ಎಲ್ಲ ಕಡೆಗಳಲ್ಲೂ ಇಸ್ಲಾಮಿನ ಹೆಸರಿನಲ್ಲಿ ಅಶಾಂತಿಯನ್ನು ಹರಡಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ ಲೌಕಿಕತೆಯ ಪ್ರಭಾವದಿಂದ ಇನ್ನೊಂದು ಗುಂಪು ಧರ್ಮದೊಂದಿಗೆ ಸಂಬಂಧ ತ್ಯಜಿಸಿದೆ. ಅಧಿಕಾರದಲ್ಲಿರುವ ಕೆಲವು ರಾಜಕಾರಣಿಗಳು ಹೇಗಿದ್ದಾರೆಂದರೆ ಅವರು ಈ ಮೌಲವಿಗಳು ಹೇಳುವುದನ್ನು ಅಂಗೀಕರಿಸುವುದಿಲ್ಲವಾದರೂ ತಮ್ಮ ಅಧಿಕಾರದ ಕುರ್ಚಿಯನ್ನು ಕಿತ್ತುಕೊಳ್ಳಬಾರದು ಎಂಬ ಭಯದಿಂದ, ಮೌಲವಿಗಳು ತಮ್ಮ ವಿರುದ್ಧ ಜನರನ್ನು ಬಡಿದೆಬ್ಬಿಸಬಹುದೆಂಬ ಭಯದಿಂದ ಮೌನವಾಗಿ ಇರುತ್ತಾರೆ. ಈ ರೀತಿ ಅಲ್ಲಾಹನು ನಿಯೋಜಿಸಿದವರನ್ನು ನಿರಾಕರಿಸಿದ ಪ್ರತಿಯೊಂದು ಗುಂಪು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳಿಂದ ದೂರ ಸರಿದವರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅಹ್ಮದಿಯರು ಚಿಂತಿಸಬೇಕಾಗಿದೆ. ಅಹ್ಮದಿಯರು ಈ ಕಾಲಘಟ್ಟದ ಇಮಾಮರನ್ನು ನಂಬಿರುವ ಕಾರಣ ಅವರ ಮೇಲೆ ಬಹಳ ದೊಡ್ಡ ಜವಾಬ್ದಾರಿ ಹೊರಿಸಲಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ಹೀಗೆ ಕಲಿಸಿದ್ದಾರೆ: ನೀವು ಅಲ್ಲಾಹನ ಆಜ್ಞೆಗಳ ಪ್ರಕಾರ ವರ್ತಿಸಬೇಕು. ಅವನ ಸಂದೇಶವಾಹಕರನ್ನು ನೀವು ಅನುಸರಿಸಬೇಕು. ನೀವು ನಿಮ್ಮ ವಿಶ್ವಾಸವನ್ನು ನಷ್ಟಗೊಳಿಸಬಾರದು. ನೀವು ಅಶಾಂತಿಯನ್ನು ಹರಡಬಾರದು. ನೀವು ಅಲ್ಲಾಹನ ಸಂದೇಶವನ್ನು ಲೋಕಕ್ಕೆ ತಲಪಿಸಿ ಏಕದೇವ ವಿಶ್ವಾಸ ಸ್ಥಾಪಿತವಾಗುವಂತೆ ಮಾಡಬೇಕು. ಅಲ್ಲಾಹನು ನಮಗೆ ಮಾರ್ಗದರ್ಶನ ನೀಡಿದ ಪ್ರಕಾರ ಕಾರ್ಯಪ್ರವೃತ್ತರಾಗಬೇಕು. ಅದೆಂದರೆ, **ಉದ್‌ಊ ಇಲಾ ಸಬೀಲಿ ರಬ್ಬಿಕ ಬಿಲ್ ಹಿಕ್‌ಮತಿ ವಲ್ ಮೌಇಝತಿಲ್ ಹಸನತಿ ವಜಾದಿಲ್‌ಹುಮ್ ಬಿಲ್ಲತೀ ಹಿಯ ಅಹ್‌ಸನ್ ಇನ್ನ ರಬ್ಬಕ ಹುವ ಅಅ್‌ಲಮು ಬಿಮನ್ ಝುಲ್ಲ ಅನ್ ಸಬೀಲಿಹೀ ವಹುವ ಅಅ್‌ಲಮು ಬಿಲ್ ಮುಹ್‌ತದೀನ್.** ಜಾಣ್ಮೆಯಿಂದಲೂ ಸದುಪದೇಶದಿಂದಲೂ ನಿನ್ನ ಪ್ರಭುವಿನ ಮಾರ್ಗದೆಡೆಗೆ ನೀನು (ಜನರನ್ನು) ಆಮಂತ್ರಿಸು. ಉತ್ತಮವಾದ ರೀತಿಯಲ್ಲಿ ಅವರೊಡನೆ ವಾಗ್ವಾದ ಮಾಡು. ತನ್ನ ಮಾರ್ಗವನ್ನು ಬಿಟ್ಟುಹೋಗುವವರು ಯಾರೆಂದು ನಿನ್ನ ಪ್ರಭು ಚೆನ್ನಾಗಿ ಬಲ್ಲವನಾಗಿದ್ದಾನೆ. ಸರಿಯಾದ ಮಾರ್ಗವನ್ನು ಅವಲಂಬಿಸುವವರು ಯಾರೆಂದೂ ಅವನು ಚೆನ್ನಾಗಿ ತಿಳಿದಿರುತ್ತಾನೆ(16:126).

ಆದುದರಿಂದ ತಬ್ಲೀಗ್ ಮಾಡಲು, ಇಸ್ಲಾಮಿನ ಸುಂದರ ಉಪದೇಶಗಳನ್ನು ಹರಡಲು ಇಸ್ಲಾಮಿನ ಆಜ್ಞೆಗಳ ಔಚಿತ್ಯವನ್ನು ಪ್ರಕಟಿಸಲು ಸಾಕ್ಷ್ಯಾಧಾರಗಳೊಂದಿಗೆ ಮಾತನಾಡುವುದು ಆವಶ್ಯಕವಾಗಿದೆ. ಅಲ್ಲದೆ ಇಂದಿನ ಕಾಲದ ಮೌಲವಿ ನಾಮಧೇಯರು ಮತ್ತು ಉಗ್ರವಾದಿಗಳು ಮಾಡುವ ರೀತಿಯಲ್ಲಿ ಅಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: **ಜಾದಿಲ್‌ಹುಮ್ ಬಿಲ್ಲತೀ ಹಿಯ ಅಹ್‌ಸನ್** ಅವರೊಂದಿಗೆ ಉತ್ತಮವಾದ ರೀತಿಯಲ್ಲಿ ವಾಗ್ವಾದ ಮಾಡು ಎಂದು ಹೇಳಿದುದರ ಅರ್ಥ, ನಾವು ಬಹಳ ಮೃದುವಾಗಿ ಮಾತನಾಡಿ ಜನರನ್ನು ಮೆಚ್ಚಿಸಲು ಅವಾಸ್ತವಿಕವಾದುದನ್ನು ಸರಿ ಎಂದು ಒಪ್ಪಿಕೊಳ್ಳಬೇಕೆಂದಲ್ಲ. ಜಾಣ್ಮೆಯಿಂದ ವರ್ತಿಸಬೇಕೆಂದು ಹೇಳಿದುದರ ಅರ್ಥ ಹೇಡಿತನದಿಂದ ವರ್ತಿಸಬೇಕೆಂದು ಅಲ್ಲ. ಸತ್ಯವಾದ ಮಾತನ್ನು

ಶಾಂತಿಯುತವಾದ ಹಾಗೂ ಅಶಾಂತಿ ಹಬ್ಬದ ರೀತಿಯಲ್ಲಿ ಪ್ರಕಟಿಸುವುದೇ ಜಾಣ್ಮೆಯಾಗಿದೆ.

ಇನ್ನೊಂದು ಸ್ಥಳದಲ್ಲಿ ಇನ್ನಷ್ಟು ಸ್ಪಷ್ಟವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: ನೀವು ಯಾರೊಂದಿಗಾದರೂ ವಾಗ್ವಾದ ಮಾಡುವಾಗ ಜಾಣ್ಮೆಯಿಂದಲೂ ಉತ್ತಮ ಉಪದೇಶದೊಂದಿಗೆ ಮೃದುವಾಗಿ ಸಭ್ಯತೆಯಿಂದ ಮಾಡಿರಿ. ಈ ಕಾಲದ ಬಹುತೇಕ ಅಜ್ಞಾನಿಗಳೂ ಅವಿವೇಕಿಗಳೂ ಆಗಿರುವ ಮೌಲವಿಗಳು ತಮ್ಮ ಮೌಢ್ಯದ ಕಾರಣದಿಂದ ಹೀಗೆ ಯೋಚಿಸುತ್ತಾರೆಂಬುದು ಸತ್ಯವಾಗಿದೆ. ಅಂದರೆ, ಜಿಹಾದ್ ಮತ್ತು ಖಡ್ಗದ ಮೂಲಕ ಧರ್ಮವನ್ನು ಹರಡುವುದು ಅತ್ಯಂತ ಪುಣ್ಯದಾಯಕ ಕೆಲಸವಾಗಿದೆ ಎಂದು ಅವರು ಭಾವಿಸುತ್ತಾರೆ. ಅವರು ಮರೆಯಾಗಿ ಕಾಪಟ್ಯದಿಂದ ಜೀವಿಸುತ್ತಿದ್ದಾರೆ. ಅವರ ಈ ಯೋಚನೆ ಅತ್ಯಂತ ತಪ್ಪಾಗಿರುತ್ತದೆ. ಆದರೆ ಅವರ ತಪ್ಪು ಗ್ರಹಿಕೆಯ ಕಾರಣದಿಂದ ದೈವಿಕ ಗ್ರಂಥವನ್ನು ಆಕ್ಷೇಪಕ್ಕೆ ಗುರಿಪಡಿಸಲಾಗದು. ಆ ಮೌಲವಿಗಳು ಅಂತಹ ಮಾತುಗಳನ್ನಾಡುವುದು ಅವರು ಮಾಡುವ ಸ್ವಂತ ತಪ್ಪಾಗಳಾಗಿವೆ. ಆ ಮೂಲಕ ಅಲ್ಲಾಹನ ಗ್ರಂಥವನ್ನು ಆಕ್ಷೇಪಕ್ಕೆ ಗುರಿಪಡಿಸಲಾಗದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪುನಃ ಹೇಳುತ್ತಾರೆ: ವಾಸ್ತವಿಕ ಸತ್ಯಗಳನ್ನು ಸ್ಥಾಪಿಸಲು ಬಲಾತ್ಕಾರದ ಆವಶ್ಯತೆ ಇಲ್ಲ. ಬಲಾತ್ಕಾರ ಮಾಡುವುದರ ಅರ್ಥವೇನೆಂದರೆ ಆಧ್ಯಾತ್ಮಿಕ ಸಾಕ್ಷ್ಯಾಧಾರಗಳು ಬಲಹೀನವಾಗಿದೆ ಎಂದು. ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದನು: **ಫಸ್‌ಬಿರ್ ಕಮಾ ಸಬರ ಉಲುಲ್ ಅಝ್ಮಿ.** ಎಲ್ಲ ದೃಢಚಿತ್ತರಾದ ಸಂದೇಶವಾಹಕರ ಸಹನೆಗೆ ಸಮಾನವಾಗಿ ನೀನು ಸಹನೆ ದೋರು. ಎಂದರೆ ಎಲ್ಲ ಪ್ರವಾದಿಗಳು ತೋರಿಸಿದ ಸಹನೆಯನ್ನು ಜಮಾಯಿಸಿದರೆ ಅದು ನೀನು ತೋರಿಸುವ ಸಹನೆಗಿಂತ ಹೆಚ್ಚಾಗಿರದಿರಲಿ.

ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ: **ಲಾ ಇಕ್‌ರಾಹ ಫಿದ್ದೀನಿ.** ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ. **ಉದ್‌ಊ ಇಲಾ ಸಬೀಲಿ ರಬ್ಬಿಕ ಬಿಲ್ ಹಿಕ್‌ಮತಿ ವಲ್ ಮೌಇಝತಿಲ್ ಹಸನತಿ.** ಜಾಣ್ಮೆಯಿಂದಲೂ ಸದುಪದೇಶದಿಂದಲೂ ನಿನ್ನ ಪ್ರಭುವಿನ ಮಾರ್ಗದೆಡೆಗೆ ನೀನು (ಜನರನ್ನು) ಆಮಂತ್ರಿಸು. **ವಲ್ ಕಾಝಿಮೀನಲ್ ಗೈಝ ವಲ್ ಆಫೀನ ಅನಿನ್ನಾಸ್.** ಸತ್ಯವಿಶ್ವಾಸಿಗಳು ಕೋಪವನ್ನು ತಿಂದು ಹಾಕುತ್ತಾರೆ. ಮತ್ತು ಅವರು ದೌರ್ಜನ್ಯಗಾರರಾದ ಜನರ ಆಕ್ರಮಣಗಳನ್ನು ಕ್ಷಮಿಸುತ್ತಾರೆ. ಅವರು ತಪ್ಪಾಗಿ ವರ್ತಿಸುವುದಿಲ್ಲ.

ಮೇಲಿನ ರೀತಿಯಲ್ಲಿ ಉಪದೇಶಿಸಿದ ಅಲ್ಲಾಹನು 'ನೀವು ನಿಮ್ಮ ಧರ್ಮಕ್ಕೋಸ್ಕರ ಅವಿಶ್ವಾಸಿಗಳನ್ನು ಕೊಲ್ಲಿರಿ. ಅವರ ಸಂಪತ್ತನ್ನು ಕೊಳ್ಳೆ ಹೊಡೆಯಿರಿ. ಅವರ ಮನೆಗಳನ್ನು ಜನರಹಿತವನ್ನಾಗಿ ಮಾಡಿರಿ' ಎಂದು ಆಜ್ಞಾಪಿಸುವನೆ? ಇಸ್ಲಾಮಿನ ಆರಂಭದ ಕಾಲದಲ್ಲಿ ಅಲ್ಲಾಹನ ಆಜ್ಞೆ ಪ್ರಕಾರ ಮಾಡಿದ ಕೆಲಸ ಕೇವಲ ಇದಾಗಿತ್ತು. ಯಾರು ದೌರ್ಜನ್ಯ ಮಾಡಲು ಖಡ್ಗ ಎತ್ತಿದರೋ ಅವರು ಖಡ್ಗದಿಂದಲೇ ಹತರಾದರು. ಅವರು ಮಾಡಿದುದನ್ನು ಸ್ವತಃ ಅನುಭವಿಸಿದರು. ಆದರೆ ಖಡ್ಗದಿಂದ ಅವಿಶ್ವಾಸಿಗಳನ್ನು ಕೊಲ್ಲುತ್ತಾ ತಿರುಗಾಡಿರಿ ಎಂದು ಎಲ್ಲಿ ಬರೆದಿದೆ. ಇದು ಅಜ್ಞಾನಿ ಮೌಲವಿಗಳ ಮತ್ತು ಅವಿವೇಕಿಗಳಾದ ಪಾದರಿಗಳ ಅಭಿಪ್ರಾಯ ಮಾತ್ರವಾಗಿದೆ. ಅದರಲ್ಲಿ ಸತ್ಯಾಂಶವೇನೂ ಇರುವುದಿಲ್ಲ.

ಇಸ್ಲಾಮಿನ ಉಪದೇಶಗಳ ಪ್ರಕಾರ ಇತರ ಮುಸ್ಲಿಮರು ಕಾರ್ಯನಿರತರಾಗುವುದಿಲ್ಲ. ಅಥವಾ ಇಸ್ಲಾಮಿನ ಸಂದೇಶ ಅನ್ಯರಿಗೆ ತಲಪಿಸುವ ಆಸಕ್ತಿ ಅವರಿಗಿಲ್ಲ. ಅಥವಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ಮೌಲವಿಗಳು ಅಜ್ಞಾನಿಗಳೂ ಅವಿವೇಕಿಗಳೂ ಆಗಿದ್ದಾರೆ. ಆದರೆ ಅಹ್ಮದಿಯರಾದ ನಾವು ಇಸ್ಲಾಮಿನ ನೈಜ ಉಪದೇಶಗಳನ್ನು ಮುಸ್ಲಿಮರಲ್ಲಿಯೂ ಮುಸ್ಲಿಮೇತರರಲ್ಲಿಯೂ ಪ್ರಚಾರ ಮಾಡಬೇಕಾಗಿದೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿ ತನ್ನ ಪ್ರದೇಶದಲ್ಲಿ ತನ್ನ ವಲಯದಲ್ಲಿ ಈ ವಿಷಯದ ಕಡೆಗೆ ಗಮನ ಹರಿಸುವುದು ಆವಶ್ಯಕವಾಗಿದೆ.

ಇಂತಹ ಪರಿಸ್ಥಿತಿಗಳಲ್ಲಿ ನಮ್ಮ ಹೊಣೆಗಾರಿಕೆ ಇನ್ನಷ್ಟು ಹೆಚ್ಚಾಗಿದೆ. ಪ್ರತಿಯೊಬ್ಬ ಅಹ್ಮದಿ ತನ್ನ ಈ ಹೊಣೆಗಾರಿಕೆ ಬಗ್ಗೆ ಪ್ರಜ್ಞೆ ಹೊಂದುವುದು ಆವಶ್ಯಕವಾಗಿದೆ. ಪ್ರತಿಯೊಬ್ಬ ಅಹ್ಮದಿಯ ಪ್ರತಿಯೊಂದು ಕೆಲಸ ಇಸ್ಲಾಮ್ ಧರ್ಮದ ಮಾದರಿಯಾಗಲಿ. ತಬ್ಲೀಗ್ ಮಾಡುವುದಿಲ್ಲವಾದರೂ ಅಹ್ಮದಿಯ ಮಾತು ಮತ್ತು ಕೃತ್ಯ ಇಸ್ಲಾಮಿನ ಸಂದೇಶ ನೀಡುವ ರೀತಿಯಲ್ಲಿರಬೇಕು. ತಬ್ಲೀಗ್‌ಗೆ ಸಂಬಂಧಿಸಿ ನಾವು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರು ಹೇಳಿದ ಮಾತನ್ನು ನಮ್ಮ ಮುಂದೆ ಇರಿಸಬೇಕು. ಅವರು ಹೀಗೆ ಹೇಳಿದ್ದಾರೆ: ಮನುಷ್ಯರ ಹೃದಯಗಳಿಗೆ ಕೆಲವು ಇಚ್ಛೆಗಳೂ ಆಸಕ್ತಿಗಳೂ ಇರುತ್ತವೆ. ಆದುದರಿಂದ ಅವರು ಕೆಲವೊಂದು ಸಮಯದಲ್ಲಿ ಮಾತನ್ನು ಆಲಿಸಲು ಸಿದ್ಧರಾಗುತ್ತಾರೆ. ಇನ್ನು ಕೆಲವು ಸಂದರ್ಭದಲ್ಲಿ ಮಾತನ್ನು ಆಲಿಸಲು ಸಿದ್ಧರಾಗಿರುವುದಿಲ್ಲ. ಆದುದರಿಂದ ಜನರ ಹೃದಯಗಳನ್ನು ಅವರ ಆಸಕ್ತಿಗಳ ಪ್ರಕಾರ ಪ್ರವೇಶಿಸಿರಿ. ಜನರ ಸ್ಥಿತಿ ಹೇಗಿದೆ ಎಂದು ನೋಡಿರಿ. ಅವನು ಮಾತನ್ನು ಆಲಿಸಲು ಸಿದ್ಧನಾಗಿರುವಾಗ ಮಾತನಾಡಿರಿ. ನಾವು ಈ ಸದುಪದೇಶವನ್ನು ಅವಲಂಬಿಸಬೇಕು.

ಆಸ್ಟ್ರೇಲಿಯಾದಲ್ಲಿ ಒಂದು ವಿಭಾಗದ ಜನರು ಇಸ್ಲಾಮಿಗೆ ವಿರುದ್ಧವಾಗಿ ಹಗೆತನದಲ್ಲಿ ಎಷ್ಟು ಮುಂದುವರಿದಿದ್ದಾರೆಂದರೆ ಅವರು ಹೇಳುತ್ತಾರೆ: ಮುಸ್ಲಿಮ್ ಪುರುಷರು ಸ್ತ್ರೀಯರೊಂದಿಗೆ ಮತ್ತು ಮುಸ್ಲಿಮ್ ಸ್ತ್ರೀಯರು ಪುರುಷರೊಂದಿಗೆ ಹಸ್ತಲಾಘವ ಮಾಡುವುದಿಲ್ಲವಾದರೆ ಅವರನ್ನು ದೇಶದಿಂದ ಹೊರಗೆ ಹಾಕಬೇಕು. ಇದಕ್ಕೆ ಸಂಬಂಧಿಸಿ ಪ್ರತಿಯೊಬ್ಬ ಅಹ್ಮದಿ ತನ್ನ ವಲಯದಲ್ಲಿ ಜಾಣ್ಮೆಯಿಂದ ವರ್ತಿಸಬೇಕು. ಕೆಲವು ಜನರು ಹಿಜಾಬ್ ಧರಿಸುವ ಬಗ್ಗೆ ವಿರೋಧ ಹೊಂದಿದ್ದಾರೆ. ಕೆಲವು ದೇಶಗಳಲ್ಲಿ ಮಸ್‌ಜಿದ್‌ಗಳ ಮಿನಾರ್‌ಗಳ ಬಗ್ಗೆ ವಿರೋಧ ಸೂಚಿಸಲಾಗುತ್ತಿದೆ. ಹಾಲೆಂಡಿನ ಒಬ್ಬ ರಾಜಕಾರಣಿ, ಎಲ್ಲ ಮುಸ್ಲಿಮರನ್ನೂ ದೇಶದಿಂದ ಹೊರಗೆ ಹಾಕಬೇಕು ಅಥವಾ

ಒಂದು ವಿಶಿಷ್ಟ ದೇಶದ ಮುಸ್ಲಿಮರನ್ನು ಹೊರಗೆ ಹಾಕಬೇಕು ಎಂದು ಹೇಳುತ್ತಾರೆ. ಅಮೇರಿಕದ ಅಧ್ಯಕ್ಷರು ಕೆಲವು ಮುಸ್ಲಿಮ್ ದೇಶಗಳ ವಲಸೆಗಾರರು ಅಮೇರಿಕವನ್ನು ಪ್ರವೇಶಿಸುವುದನ್ನು ನಿಷಿದ್ಧಗೊಳಿಸಲು ಇಚ್ಛಿಸುತ್ತಾರೆ. ಇವುಗಳೆಲ್ಲ ಇಸ್ಲಾಮ್ ಧರ್ಮದ ವಿರುದ್ಧದ ಯೋಚನೆಗಳ ಫಲಸ್ವರೂಪವಾಗಿವೆ. ಇಸ್ಲಾಮ್ ವಿರೋಧಿ ಶಕ್ತಿಗಳು ಬಲಗೊಳ್ಳುತ್ತಿರುವ ಈ ದೇಶಗಳಲ್ಲಿ ಅವರನ್ನು ನಿರ್ಬಲ ಗೊಳಿಸಲು, ಸಂಘಟಿತರಾಗಿ ಪ್ರಯತ್ನ ಮಾಡಲು ಸಾಧ್ಯವಾಗುವುದು ಅಹ್ಮದಿಯಾ ಜಮಾಅತ್‌ಗೆ ಮಾತ್ರವಾಗಿದೆ. ಇತರ ಮುಸ್ಲಿಮರಿಗೆ ಇಸ್ಲಾಮಿನ ಸುಂದರ ಉಪದೇಶಗಳನ್ನು ಪ್ರಕಟಿಸುವ ಮತ್ತು ಸಂದೇಶ ತಲಪಿಸುವ ಕೆಲಸ ಮಾಡಲು ಸಾಧ್ಯವೇ ಇಲ್ಲ. ಅವರ ಬಳಿ ಅಂತಹ ವ್ಯವಸ್ಥೆಯೇ ಇಲ್ಲ. ಅವರಿಗೆ ಜ್ಞಾನವೂ ಇಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ತಮ್ಮನ್ನು ಜೋಡಿಸಿಕೊಂಡವರೇ ಈ ಕೆಲಸ ಮಾಡುವುದು ಅಲ್ಲಾಹನಿಂದ ವಿಧಿಸಲ್ಪಟ್ಟಿದೆ. ಈ ವಿಷಯದ ಮಹತ್ವವನ್ನು ನಾವು ಮನವರಿಕೆ ಮಾಡಿಕೊಳ್ಳಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇಸ್ಲಾಮನ್ನು ಸಂರಕ್ಷಣೆ ಮಾಡಲು ಮತ್ತು ಅದರ ಸತ್ಯವನ್ನು ಲೋಕಕ್ಕೆ ಪ್ರಕಟಿಸಲು, ನೀವು ಮಾಡಬೇಕಾದ ಮೊದಲನೆಯ ಕೆಲಸವೇನೆಂದರೆ ನೀವು ನೈಜ ಮುಸ್ಲಿಮರ ಮಾದರಿಯಾಗಿ ಕಾಣಿಸಿಕೊಳ್ಳಬೇಕು. ಎರಡನೆಯ ಕೆಲಸವೇನೆಂದರೆ ಇಸ್ಲಾಮಿನ ವೈಶಿಷ್ಟ್ಯಗಳನ್ನು ಅದರ ಒಳಿತುಗಳನ್ನು ಲೋಕದಲ್ಲಿ ಹರಡಬೇಕು.

ನಾವು ಈ ಉಪದೇಶಗಳ ಪ್ರಕಾರ ಜೀವಿಸುವವರಾಗುವಂತೆ ಅಲ್ಲಾಹನು ನಮಗೆ ಭಾಗ್ಯ ನೀಡಲಿ. ನಾವು ನೈಜ ಮುಸ್ಲಿಮರ ಉದಾಹರಣೆಯಾಗುವಂತೆ ಅಲ್ಲಾಹನು ಮಾಡಲಿ. ಎಲ್ಲ ವಿಧಗಳಲ್ಲಿ ವಿರೋಧಿಸಲ್ಪಟ್ಟರೂ ನಾವು ಇಸ್ಲಾಮಿನ ಸುಂದರ ಉಪದೇಶಗಳನ್ನು ಮತ್ತು ವೈಶಿಷ್ಟ್ಯಗಳನ್ನು ಲೋಕದಲ್ಲಿ ಹರಡುವವರಾಗುವಂತೆ ಅಲ್ಲಾಹನು ಮಾಡಲಿ. ನೈಜ ಇಸ್ಲಾಮನ್ನು ಸಂರಕ್ಷಿಸುವವರನ್ನಾಗಿಯೂ ಅದರ ಸತ್ಯವನ್ನು ಪ್ರಕಟಿಸುವವರನ್ನಾಗಿ ನಮ್ಮಲ್ಲಿ ಪ್ರತಿಯೊಬ್ಬನನ್ನೂ ಅಲ್ಲಾಹನು ಮಾಡಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್, 1. ಮುಕರ್ರಮ್ ಮೌಲಾನ ಹಕೀಮ್ ಮುಹಮ್ಮದ್ ದೀನ್ ಸಾಹೇಬ್ ಖಾದಿಯಾನ್, 2. ಮುಕರ್ರಮ್ ಫಝ್ಲುಲ್ ಇಲಾಹೀ ಅನ್‌ವರಿ ಸಾಹೇಬ್ ಜರ್ಮನಿ, 3. ಮುಕರ್ರಮ್ ಇಬ್ರಾಹೀಮ್ ಬಿನ್ ಅಬ್ದುಲ್ಲಾ ಸಾಹೇಬ್ ಮರಾಕೇಶ್. ಇವರ ನಮಾಝೆ ಜನಾಝ ಗಾಯಿಬ್ ಜುಮುಅ ನಮಾಝ್ ನಂತರ ನಿರ್ವಹಿಸುವುದಾಗಿ ಹೇಳಿ ಅವರ ಸದ್ಗುಣಗಳನ್ನು ವಿವರಿಸಿದರು).

*****

***Friday Sermon delivered by Hadrath Khaleefatul Masih Al Khamis*** *(atba)*

*At, Masjid Baithul Futhuh, London on 17-03-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon